ಹೇಳಿದರು.

ಅವರಿಗೆಲ್ಲ ಪಿಯಾನೊ ನಾಶವಾಗುತ್ತದೆ ಎಂದು ತಿಳಿಯಿತು. ಮತ್ತು ಆ ಅರಿವು ಅವರನ್ನು ಸಂಭ್ರಮಗೊಳ್ಳುವಂತೆ ಮಾಡಿತು. ಅವರು ತಮ್ಮೊಳಗೆ ತಾವೇ ಆಗಾಗ ನಕ್ಕರು. ಈ ಕಾರಣದಿಂದ ಡಾಲಿ ಮೇಲಕ್ಕೆ ನೆಗೆದು ಜೋರಾಗಿ ಬೊಗಳಿತು.

ಎಲ್ಲ ಮನೆಗಳೂ ಹೆಚ್ಚಾಗಿ ಎಳೆಯ ಹುಡುಗಿಯರಿಂದ ಕಿಕ್ಕಿರಿದು ಹೋಗಿತ್ತು.

'ಅಯ್ಯಮ್ಮ! ಏನದು? ಒಂದು ಪಿಯಾನೊ!' ಎಂದವರು ನಂಬಲಾಗದೇ ಉದ್ಗರಿಸಿದರು.

'99ನೆಯ ಮನೆಯಿಂದ ಬಂದದ್ದು' ಎಂದು ಒಬ್ಬ ನೀಗ್ರೋ ಹುಡುಗ ಮನೆಮನೆಗೆ ಹೇಳಿ ಬಂದ.

'ಯಾಕೆ? ಸಾರಾ ಅಲ್ಲಿ ವಾಸಿಸುತ್ತಾಳೆ.'

'ಅದು ಯಾವೋ ದೆ ಒಲಿವ್ಯೆರಾನ ಮನೆ.'

ಅವಳ ಗೆಳತಿಯೊಬ್ಬಳು ನೇರ ಒಲಿವ್ಯೆರಾನಿಂದಲೇ ವಿಷಯ ತಿಳಿಯಲು ಹೊರಗೋಡಿ ಬಂದಳು.

'ಏನಾಯಿತು ಯಾವೋ?'

'ಏನೂ ಆಗಿಲ್ಲ. ನಾನು ಏನು ಮಾಡುತ್ತಿದ್ದೇನೆಂದು ನನಗೆ ಗೊತ್ತು. ಎಲ್ಲರೂ ದಾರಿ ಬಿಡಿ.'

'ಆದರೆ, ನೀವು ಅದನ್ನು ಮಾರುವುದಿಲ್ಲ ಏಕೆ?'

'ಮಾರುತ್ತೇನೆ. ಆಯ್ತಾ? ಅದನ್ನು ಅಟ್ಲಾಂಟಿಕ್ ಸಮುದ್ರಕ್ಕೆ ಮಾರುತ್ತೇನೆ. ಅಲ್ಲಿ ನೋಡಿ, ಆ ಸಮುದ್ರ...' ಗಲ್ಲಿಗೇರಿಸುವವನ ಅಮಲಿನಲ್ಲಿ ಅವನ ನಡಿಗೆ ಮುಂದುವರಿಯಿತು.

'ಇನ್ನೂ ಎಡಕ್ಕೆ ಹುಡುಗ್ರಾ... ಎಚ್ಚರ... ಕೆಳಗೆ ಬೀಳದಂತೆ ನೋಡಿಕೊಳ್ಳಿ... ಬರೇ ದೊಡ್ಡ ಹುಡುಗರು ಹಿಡಿದರೆ ಸಾಕು. ಉಳಿದವರು ಅಡ್ಡ ಬರಬೇಡಿ.'

ಆಗಾಗ ಅವರಲ್ಲೊಬ್ಬ ಹುಡುಗ ಪಿಯಾನೊದ ಒಳಗೆ ಕೈ ಹಾಕಿ ತಂತಿಗಳ ಮೇಲೆ ಕೈಯಾಡಿಸುತ್ತಿದ್ದ. ಆಗ ಬರುತ್ತಿದ್ದ ಸದ್ದು ಮರಣಕಾಲದ ಸಂಗೀತದಂತೆ ಕೇಳುತ್ತಿತ್ತು. ಬಾಲ್ಕನಿಯ ಮೇಲೆ ನಿಂತಿದ್ದ ಹೆಣ್ಣೊಬ್ಬಳು ಯಾವೋನತ್ತ ಕೂಗಿದಳು – 'ಅದನ್ನು ಮಾರುತ್ತೀರಾ?'

'ಇಲ್ಲಮ್ಮ, ಅದು ಮಾರಾಟಕ್ಕಿಲ್ಲ. ಸುಮ್ಮನೆ ಕೊಟ್ಟುಬಿಡುತ್ತೇನೆ. ಯಾಕೆ, ನಿಮಗೆ ಬೇಕಿತ್ತಾ?'

ಆಕೆ ಅವಮಾನದಿಂದ ಕೆಂಪಾದಳು. ಒಳಗೆ ಹೋದಳು. ಯಾವೋ ತನ್ನ ಪ್ರಸ್ತಾಪವನ್ನು ವಿಶಾಲಗೊಳಿಸಿದ – 'ಇಲ್ಲಿರುವ ಯಾರಿಗಾದರೂ ಒಂದು ಪಿಯಾನೊ ಬೇಕಾ?'

43ನೆಯ ಮನೆಯಲ್ಲಿದ್ದ ಪೋಲಿಶ್ ನಿರಾಶ್ರಿತರ ಸಂಸಾರವೊಂದು ಆ ಪ್ರಸ್ತಾಪವನ್ನು ಸ್ವೀಕರಿಸಿತು. ಅವರಿಗೆ ಆಶ್ಚರ್ಯವಾಯಿತು ನಿಜ, ಆದರೂ ಒಪ್ಪಿಕೊಂಡರು.

ಯಾವೋ ದೆ ಒಲಿವ್ಯೆರಾ, 'ಹಾಗಿದ್ದರೆ ಇದು ನಿಮ್ಮದು' ಎಂದ.

ಪೋಲಿಶ್ ಕುಟುಂಬ ಮನೆಯಿಂದ ಕೆಳಗಿಳಿದು ಬಂದು ಪಿಯಾನೊದ ಸುತ್ತ ನೆರೆಯಿತು.

'ಖಂಡಿತ ನಾವಿದನ್ನು ತೆಗೆದುಕೊಳ್ಳುತ್ತೇವೆ... ಆದರೆ, ನಮ್ಮ ಮನೆ ಸಣ್ಣದು. ಅದನ್ನು ಸಿದ್ಧಪಡಿಸಲು ಕೆಲವು ದಿನಗಳ ಸಮಯಾವಕಾಶ ಕೊಡಿ.'

ಒಲಿವ್ಯೆರಾ 'ಈಗ, ಈಗ ಅಂದರೆ ಈಗ. ಇಲ್ಲದಿದ್ದರೆ ಇಲ್ಲ. ಅದು ಇಲ್ಲಿದೆ. ನಿಮ್ಮ ಮನೆಯ ಎದುರೇ. ಬೇಡವೋ, ಆಯಿತು. ನಡೀರಿ ಹುಡುಗ್ರಾ' ಎಂದ.

ಪಿಯಾನೊ ಸಮುದ್ರದ ಹತ್ತಿರ ಹತ್ತಿರಕ್ಕೆ ಬಂತು. ಇರುವೆಗಳು ಎತ್ತಿಕೊಂಡು ಹೋಗುವಾಗ ಓಲಾಡುವ ಜಿರಳೆಯಂತೆ ಅದು ಓಲಾಡಿತು.

ಮನೆಗಳ ಬಾಗಿಲುಗಳಿಂದ, ಕಿಟಕಿಗಳಿಂದ, ಬಾಲ್ಕನಿಗಳಿಂದ ಬರುವ ಹಲವು ದನಿಗಳನ್ನು ಒಲಿವ್ಯೆರಾ ಗುರುತಿಸಿದ್ದ. 'ಇಲ್ಲಿಯ ತನಕ ಎಂದೂ ನೋಡಿರದ ಹುಚ್ಚಾಟವಪ್ಪ ಇದು' ಎಂದೊಬ್ಬ ಬಾಲ್ಕನಿಯಿಂದ ಕೂಗಿ ಹೇಳಿದ.

'ಹುಚ್ಚಾಟವೇ? ಆಯಿತು, ಹಾಗಿದ್ದರೆ ನೀನೇ ತೆಗೆದುಕೋ' ಎಂದು ತಲೆಯೆತ್ತಿ ಅವನನ್ನೇ ನೋಡುತ್ತಾ ಹೇಳಿದ ಯಾವೋ ದೆ ಒಲಿವ್ಯೆರಾ.

ಮುಂದೆ ಇನ್ನೂ ಅಂತಹುದೇ ಪ್ರಸಂಗಗಳ ಪುನರುಕ್ತಿಯಾಯಿತು. ಪ್ರತಿಯೊಬ್ಬರಿಗೂ ಅದು ಹುಚ್ಚು ಅನಿಸಿತು. ಪ್ರತಿಯೊಬ್ಬರಿಗೂ ಪಿಯಾನೊದ ಮೇಲೆ ಆಸೆ. ಆದರೆ, ಅದರ ಮಾಲೀಕ ತಕ್ಷಣ ಕೊಡಲೊಪ್ಪಿದರೂ ಮುಜುಗರ ಪೂರಿತ ಮೌನ. ಇಷ್ಟಕ್ಕೂ ಯಾವುದೇ ಮುನ್ಸೂಚನೆ ಇಲ್ಲದೆ ಹೇಳಿದ ತಕ್ಷಣ ಪಿಯಾನೊವನ್ನು ಯಾರು ಕೊಳ್ಳಬಯಸುತ್ತಾರೆ?

ಟೀಕೆಟಿಪ್ಪಣಿಗಳ ಪ್ರಲಾಪಗಳ ನಡುವೆಯೇ ಯಾವೋ ದೆ ಒಲಿವ್ಯೆರಾ ದೃಢ ಸಂಕಲ್ಪದಿಂದ